ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಲಕ್ಷ್ಮೇಶ್ವರ

ಚಾಸಾಃ 6 ಫ್ರಾಸಾಃ 6

| | | |
|---|---|---|
| ಸಾಕ್ಷಿಯ ಹೆಸರು | : | ಗಂಗಾಧರಯ್ಯ ತಂದೆ ಬಸಲಿಂಗಯ್ಯ ಶಿಗ್ಲಿಮಠ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಪುರೋಹಿತ |
| ವಿಳಾಸ | : | ಲಕ್ಷ್ಮೇಶ್ವರ |

ದಿನಾಂಕಃ **18.11.2025** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸಸಅ ರವರಿಂದ

ಚಾಸಾ-1 ನನ್ನ ಸೊಸೆಯಾಗಬೇಕು. ಚಾಸಾ-4 ಮತ್ತು 5 ರವರು ನನ್ನ ಬೀಗರು. ಚಾಸಾ-11 ನನ್ನ ಅಣ್ಣ. ಚಾಸಾ-7 ರಿಂದ 10 ನಮ್ಮ ಓಣಿಯವರು. ಆರೋಪಿತರು ನನ್ನ ಸಂಬಂಧಿಕರು.

ದಿನಾಂಕಃ 05.10.2023 ರಂದು 1 ನೇ ಆರೋಪಿಯು ಚಾಸಾ-1 ರವರನ್ನು ಮದುವೆಯಾಗಿರುತ್ತಾನೆ. 3 ತಿಂಗಳು ಸಂಸಾರ ಮಾಡಿ ಬೇರೆಯಾಗಿರುತ್ತಾರೆ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿಯನ್ನು ಮತ್ತು ಹೇಳಿಕೆಯನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಮಾನ್ಯ ಸಸಅ ರವರಿಗೆ ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಸಸಅ ರವರಿಂದ

ದಿಃ 20.02.2024 ರಂದು ರಾತ್ರಿ 10.00 ಗಂಟೆ ಸುಮಾರಿಗೆ 1 ನೇ ಆರೋಪಿತನು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕಪಾಳಕ್ಕೆ ಬೆನ್ನಿಗೆ ಹೊಡೆದಿರುತ್ತಾನೆ ಹಾಗೂ 2 ಮತ್ತು 3 ನೇ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಚಾಸಾ-1 ಮತ್ತು 4 ರವರು ನನಗೆ

ಹೇಳಿರುತ್ತಾರೆ ಎಂದರೆ ಸರಿ. 1 ನೇ ಆರೋಪಿತನು ಚಾಸಾ-1 ರವರ ತಾಳಿ ತೆಗೆದು ಮನೆಯಿಂದ ಹೊರಗಡೆ ಹಾಕಿರುತ್ತಾನೆ ಎಂದರೆ ಸರಿ. ಚಾಸಾ-1 ರವರು ದಿಃ 23.02.2024 ರಂದು ದೂರು ದಾಖಲಿರುತ್ತಾರೆ ಎಂದರೆ ಸರಿ. ದಿನಾಂಕಃ 25.02.2024 ರಂದು ಘಟನೆಯ ಕುರಿತು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.10 ಎಂದು ಗುರುತಿಸಲಾಯಿತು. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದರೂ ಆರೋಪಿಗಳು ನನ್ನ ಸಂಬಂಧಿಕರಾಗಿರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ- ಆರೋಪಿತರ ಪರವಾಗಿ ಶ್ರೀ. **VRP** ವಕೀಲರಿಂದ</u>

ನನ್ನ ಮತ್ತು ಆರೋಪಿತರ ನಡುವೆ ಆಸ್ತಿಯ ವಿಚಾರವಾಗಿ ಈ ಮೊದಲು ವೈಮನಸ್ಸು ಇತ್ತು ಎಂದರೆ ಸರಿಯಲ್ಲ.ನನ್ನ ಮತ್ತು ಆರೋಪಿತರ ನಡುವೆ ವೈಮನಸ್ಸು ಇದೆ ಎಂದರೆ ಸರಿಯಲ್ಲ. ಆರೋಪಿತರ ಮನೆಯ ಬಾಗಿಲು ಪೂರ್ವ ದಿಕ್ಕಿನಲ್ಲಿ ಇರುತ್ತದೆ. ನಾನು ಆರೋಪಿತರು ಚಾಸಾ-1 ರವರಿಗೆ ಕಿರುಕುಳ ನೀಡುವ ಬಗ್ಗೆ ಹಾಗೂ ಹೊಡಿಬಡಿ ಮಾಡುವ ವಿಚಾರವನ್ನು ನೋಡದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು 1 ನೇ ಆರೋಪಿಯು ಮದುವೆ ಆಗಿರುವ ವಿಚಾರವನ್ನು ಹೊರತುಪಡಿಸಿ ಬೇರೆ ವಿಚಾರ ನನಗೆ ತಿಳಿದಿಲ್ಲ ಎಂದರೆ ಸರಿ.

<u>ಮರು ವಿಚಾರಣೆ ಇಲ್ಲ</u>

<u>(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)</u>

ಓದಿ. ಹೇ. ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಲಕ್ಷ್ಮೇಶ್ವರ.

<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಲಕ್ಷ್ಮೇಶ್ವರ</u>

ಚಾಸಾಃ 8 ಫ್ರಾಸಾಃ 7

| | | |
|---|---|---|
| ಸಾಕ್ಷಿಯ ಹೆಸರು | : | ಚನ್ನಬಸಪ್ಪ ತಂದೆ ಶಂಕ್ರಪ್ಪ ಜಗಲಿ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಿಳಾಸ | : | ಲಕ್ಷ್ಮೇಶ್ವರ |

<u>ದಿನಾಂಕಃ **18.11.2025** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ- ಮಾನ್ಯ ಸಸಅ ರವರಿಂದ</u>

ಚಾಸಾ-1, 4 ರಿಂದ 7, 9 ರಿಂದ 11 ರವರ ಪರಿಚಯ ನನಗೆ ಇರುತ್ತದೆ. ಆರೋಪಿತರ ಪರಿಚಯ ನನಗೆ ಇರುತ್ತದೆ. ಚಾಸಾ-1 ಮತ್ತು 1 ನೇ ಆರೋಪಿಯು ಪ್ರೀತಿಸುತ್ತಿದ್ದು, ದಿನಾಂಕಃ 05.10.2023 ರಂದು ಸೋಮೇಶ್ವರ ದೇವಸಾನದಲ್ಲಿ ಹಿರಿಯರ ಸಮಕ್ಷಮ ಮದುವೆಯಾಗಿರುತ್ತಾರೆ. ಚಾಸಾ-1 ರವರು 1 ನೇ ಆರೋಪಿಯ ಮನೆಗೆ ಬಾಳ್ವೆ ಮಾಡಲು ಹೋಗಿರುತ್ತಾರೆ. ಸುಮಾರು 1 ರಿಂದ ಒಂದೂವರೆ ತಿಂಗಳು ಚೆನ್ನಾಗಿ ಬಾಳ್ವೆ ಮಾಡಿರುತ್ತಾರೆ. 1 ನೇ ಆರೋಪಿಯು ಚಾಸಾ-1 ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈಯುವುದು ಮತ್ತು ಹೊಡೆಯುವುದು ಮಾಡುತ್ತಿದ್ದನು. ಆರೋಪಿ 2 ಮತ್ತು 3 ರವರು ಚಾಸಾ-1 ರವರಿಗೆ ಚುಚ್ಚು ಮಾತುಗಳಿಂದ ಬೈಯುವುದು ಮಾಡುತ್ತಿದ್ದರು. ಅದೇ ರೀತಿ 1 ನೇ ಆರೋಪಿಗೆ ಬೇರೆ ಮದುವೆ ಮಾಡುವುದಾಗಿ ಸಹ ಹೇಳಿ ಮನೆಯಿಂದ ಹೊರ ಹೋಗುವಂತೆ ಹೇಳುತ್ತಿದ್ದರು. 4 ನೇ ಆರೋಪಿತನು 1 ನೇ ಆರೋಪಿಯ ಮನೆಗೆ ಆಗಾಗ ಬಂದು ಹೋಗುತ್ತಿದ್ದನು. 4 ನೇ ಆರೋಪಿತನು ಸಹ ಚಾಸಾ-1 ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈದು ಬೇರೆ ಮದುವೆ ಮಾಡುವ ವಿಚಾರವನ್ನು ಸಹ

ಹೇಳುತ್ತಿದ್ದರು. ಚಾಸಾ-4 ರವರು ಈ ವಿಚಾರವನ್ನು ತಿಳಿಸಿದಾಗ, ಊರಿನ ಹಿರಿಯರ ಸಮಕ್ಷಮ 1 ರಿಂದ 3 ನೇ ಆರೋಪಿತರಿಗೆ ಸಾಕಷ್ಟು ಬಾರಿ ಬುದ್ಧಿವಾದ ಹೇಳಿರುತ್ತೇವೆ.

ದಿನಾಂಕಃ 20.02.2024 ರಂದುರಾತ್ರಿ 10.00 ಗಂಟೆ ಸುಮಾರಿಗೆ ಚಾಸಾ-1 ರವರು ಚಿರಾಡುತ್ತಾ ಮನೆಗೆ ಹೊರಗಡೆ ಬಂದಿದ್ದು, ಅವರನ್ನು ಕೇಳಿದಾಗ ಅವರು ಆರೋಪಿತರು ಹೊಡೆಬಡಿ ಮಾಡಿ ಮನೆಯಿಂದ ಹೊರ ಹಾಕಿರುತ್ತಾರೆ ಎಂದು ತಿಳಿಸಿರುತ್ತಾರೆ. ಆರೋಪಿತರು ಸರಿ ಹೋಗದ ಕಾರಣ, ಪೊಲೀಸ ಠಾಣೆಗೆ ಹೋಗುವಂತೆ ತಿಳಿಸಿರುತ್ತೇನೆ.

ದಿನಾಂಕಃ 03.04.2024 ರಂದು ನಾನು ಠಾಣೆಗೆ ಹೋಗಿದ್ದು, ಚಾಸಾ-1 ರವರು ನೀಡಿರುವ ದೂರಿನ ಬಗ್ಗೆ  ವಿಚಾರ ತಿಳಿದು ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ಮುಂದವರೆದು ದಿನಾಂಕಃ 02.03.2024 ರಂದು ಠಾಣೆಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ-1 ರವರಿಗೆ ಹೊಡಿಬಡಿ ಮಾಡಿ ಕಿರುಕುಳ ನೀಡುತ್ತಿದ್ದ ಆರೋಪಿತರ ಪೈಕಿ 1 ರಿಂದ 3 ನೇ ಆರೋಪಿತರು ಈ ದಿನ ನ್ಯಾಯಾಲಯ ಮುಂದೆ ಇದ್ದು, 4 ನೇ ಆರೋಪಿತನು ಗೈರು ಹಾಜರು ಇರುತ್ತಾನೆ.

ಪಾಟೀ ಸವಾಲುಃ- ಆರೋಪಿತರ ಪರವಾಗಿ ಶ್ರೀ. **VRP** ವಕೀಲರಿಂದ

ನಾನು ಚಾಸಾ-1 ಮತ್ತು 4 ರವರು ಆತ್ಮೀಯರು ಎಂದರೆ ಸರಿ. ನನ್ನ ಮತ್ತು 1 ನೇ ಆರೋಪಿತನ ಮನೆ 200 ಮೀ. ಅಂತರದಲ್ಲಿ ಇದೆ. 1 ನೇ ಆರೋಪಿತನ ಮನೆಯಲ್ಲಿ ನಡೆಯುವ ವಿಚಾರಗಳು ನನ್ನ ಮನೆಯಿಂದ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮನೆಯಬಾಗಿಲು ದಕ್ಷಿಣಕ್ಕೆ ಇದ್ದು, ಸೋಮೇಶ್ವರ ಗುಡಿಯಿಂದ ಪಾದಗಟ್ಟಿ ರಸ್ತೆಯಲ್ಲಿ ಇರುತ್ತದೆ ಎಂದರೆ ಸರಿ. 1 ನೇ ಆರೋಪಿತನ ಮನೆ  ಸೋಮೇಶ್ವರ ದೇವಸಾನದ ತೇರಿನ ಮನೆ ಬಳಿ

ಬರುತ್ತದೆ. ನನ್ನ ಮತ್ತು ಆರೋಪಿಯ ಮನೆ 500 ಮೀ. ಅಂತರದಲ್ಲಿ ಇದೆ ಎಂದರೆ ಸರಿಯಲ್ಲ. ಅರೋಪಿತರು ಚಾಸಾ -1 ರವರಿಗೆ ತೊಂದರೆ ನೀಡುತ್ತಿದ್ದ ವಿಚಾರವನ್ನು ಯಾರು ತಿಳಿಸಿರುತ್ತಾರೆ ಎನ್ನುವ ಪ್ರಶ್ನೆಗೆ ನಾನೇ ಕಣ್ಣಾರೆ ನೋಡಿದ್ದು 4-5 ಬಾರಿ ಸಂದಾನ ಮಾಡಿಸಿದ್ದು ಇರುತ್ತದೆ ಎಂದು ನುಡಿಯುತ್ತಾರೆ. 4-5 ಬಾರಿ ತೊಂದರೆ ನೀಡಿದ ನಿಖರವಾದ ದಿನಾಂಕ ನನಗೆ ನೆನಪಿರುವುದಿಲ್ಲ. ಘಟನೆಯ ಕಾಲಕ್ಕೆ ಚಾಸಾ-6,7,9 ಮತ್ತು 10 ರವರು ಇದ್ದರು. ಘಟನೆಯ ದಿನದಂದು ನಾನು ಆರೋಪಿತರ ಮನೆಯ ಒಗಳಡೆ ಹೋಗಿರುವುದಿಲ್ಲ ಕಾರಣ ಮನೆಯಲ್ಲಿ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. 4 ನೇ ಆರೋಪಿಯು ಹಾವೇರಿಯ ಕೊಂಚಿಗೇರಿ ಗ್ರಾಮದ ಖಾಯಂ ನಿವಾಸಿಯಾಗಿರುತ್ತಾನೆ. 4 ನೇ ಆರೋಪಿಯು ಪುರೋಹಿತ ಕೆಲಸ ಮಾಡಿಕೊಂಡು ಪುತ್ತೂರಿನಲ್ಲಿ ಖಾಯಂ ಆಗಿ ವಾಸವಾಗಿರುತ್ತಾನೆ ಎಂದರೆ ಸರಿಯಲ್ಲ. 4 ನೇ ಆರೋಪಿಯನ್ನು ನಾನು ನೋಡಿರುತ್ತೇನೆ. ನ್ಯಾಯಾಲಯದಲ್ಲಿ ನಾನು ಈ ಪ್ರಕರಣದಲ್ಲಿ ಸಾಕ್ಷಿದಾರನಾಗಿ ಹಾಗೂ ಮತ್ತೊಂದು ಪ್ರಕರಣದಲ್ಲಿ ದೂರುದಾರನಾಗಿ ಸಾಕ್ಷಿ ನುಡಿದಿರುತ್ತೇನೆ.

ದಿನಾಂಕಃ 05.10.2023 ರಂದು ಸೋಮೇಶ್ವರ ದೇವಸಾನದಲ್ಲಿ ಹಿರಿಯರ ಸಮಕ್ಷಮ ಮದುವೆಯಾಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು 1 ನೇ ಆರೋಪಿಯ ಮನೆಗೆ ಬಾಳ್ವೆ ಮಾಡಲು ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಾರು 1 ರಿಂದ ಒಂದೂವರೆ ತಿಂಗಳು ಚೆನ್ನಾಗಿ ಬಾಳ್ವೆಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಚಾಸಾ-1 ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈಯುವುದು ಮತ್ತು ಹೊಡೆಯುವುದು ಮಾಡುತ್ತಿದ್ದನು ಎಂದು

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 2 ಮತ್ತು 3 ರವರು ಚಾಸಾ-1 ರವರಿಗೆ ಚುಚ್ಚು ಮಾತುಗಳಿಂದ ಬೈಯುವುದು ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಆರೋಪಿಗೆ ಬೇರೆ ಮದುವೆ ಮಾಡುವುದಾಗಿ ಸಹ ಹೇಳಿ ಮನೆಯಿಂದ ಹೊರ ಹೋಗುವಂತೆ ಹೇಳುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಆರೋಪಿತನು 1 ನೇ ಆರೋಪಿಯ ಮನೆಗೆ ಆಗಾಗ ಬಂದು ಹೋಗುತ್ತಿದ್ದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಆರೋಪಿತನು ಸಹ ಚಾಸಾ-1 ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈದು ಬೇರೆ ಮದುವೆ ಮಾಡುವ ವಿಚಾರವನ್ನು ಸಹ ಹೇಳುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ರವರು ಈ ವಿಚಾರವನ್ನು ತಿಳಿಸಿದಾಗ, ಊರಿನ ಹಿರಿಯರ ಸಮಕ್ಷಮ 1 ರಿಂದ 3 ನೇ ಆರೋಪಿತರಿಗೆ ಸಾಕಷ್ಟು ಬಾರಿ ಬುದ್ಧಿವಾದ ಹೇಳಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 20.02.2024 ರಂದು ರಾತ್ರಿ 10.00 ಗಂಟೆ ಸುಮಾರಿಗೆ ಚಾಸಾ-1 ರವರು ಚೀರಾಡುತ್ತಾ ಮನೆಗೆ ಹೊರಗಡೆ ಬಂದಿದ್ದು, ಅವರನ್ನು ಕೇಳಿದಾಗ ಅವರು ಆರೋಪಿತರು ಹೊಡೆಬಡಿ ಮಾಡಿ ಮನೆಯಿಂದ ಹೊರ ಹಾಕಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಸರಿ ಹೋಗದ ಕಾರಣ, ಪೊಲೀಸ ಠಾಣೆಗೆ ಹೋಗುವಂತೆ ತಿಳಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 03.04.2024 ರಂದು ನಾನು ಠಾಣೆಗೆ ಹೋಗಿದ್ದು, ಚಾಸಾ-1 ರವರು ನೀಡಿರುವ ದೂರಿನ ಬಗ್ಗೆ ವಿಚಾರ ತಿಳಿದು ಹೇಳಿಕೆಯನ್ನು

ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದವರೆದು ದಿನಾಂಕಃ 02.03.2024 ರಂದು ಠಾಣೆಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ. ಹೇ. ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಲಕ್ಷ್ಮೇಶ್ವರ.